Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ.ನಂ. 39/ 2021

ದಿನಾಂಕ ಃ 03.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 21 ಡಬ್ಲ್ಯೂ:18

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದಪ್ಪ ಹೂಗಾರ್ |
| ತಂದೆಯ ಹೆಸರು | ಶಿವಪ್ಪ |
| ವಯಸ್ಸು | 32 ವರ್ಷ |
| ಉದ್ಯೋಗ | ಸಿ ಪಿ ಸಿ 99, ಪಶ್ಚಿಮ ಪೊಲೀಸ್ ಠಾಣೆ , ಮಂಡ್ಯ |
| ವಾಸ | ಮಂಡ್ಯ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) 2018 ಅಕ್ಟೋಬರ್ ನಿಂದ ಇಲ್ಲಿಯವರೆಗೂ ನಾನು ಸಿಪಿಸಿ 99 ಆಗಿ ಪಶ್ಚಿಮ ಪೊಲೀಸ್ ಠಾಣೆ ಮಂಡ್ಯ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2) ದಿಃ 20.10.2020 ರಂದು ಚಾಸಾ.25 ಪಿಎಸ್ಐ ರವರು, ಮೊಕದ್ದಮೆ ನಂಃ 105/2020 ರಲ್ಲಿ ತನಿಖಾ ಸಮಯದಲ್ಲಿ, ಅಮಾನತ್ತು ಪಡಿಸಿದ 15 ವಸ್ತುಗಳನ್ನು ಎಫ್ ಎಸ್ ಎಲ್ ಕಚೇರಿಗೆ ಕೊಟ್ಟು ಬರುವಂತೆ ನನಗೆ ಸೂಚಿಸಿ ಪಾಸ್ ಪೋರ್ಟ ನ್ನು ನೀಡಿ ಕಳುಹಿಸಿದರು. ಪಾಸ್ ಪೋರ್ಟ ನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.69 ಎಂದು ಗುರುತಿಸಲಾಯಿತು.

3)ದಿಃ 21.10.2020 ರಂದು ಮೈಸೂರಿನಲ್ಲಿ ಇರುವ ಎಫ್ ಎಸ್ ಎಲ್ ಕಚೇರಿಗೆ ಹೋಗಿ ಸದರಿ 15 ವಸ್ತುಗಳನ್ನು ಕೊಟ್ಟು ಬಂದಿರುತ್ತೇನೆ ಹಾಗೂ ಮರು ದಿವಸ ಸ್ವೀಕೃತಿಯನ್ನು ಪಡೆದುಕೊಂಡು ಅದನ್ನು ತಂದು ನಮ್ಮ ತನಿಖಾಧಿಕಾರಿಗೆ ಹಾಜರು ಪಡಿಸಿರುತ್ತೇನೆ. ಸದರಿ ಸ್ವೀಕೃತಿಯನ್ನು ನೋಡುತ್ತಿದ್ದು ಅದನ್ನು ನಿಪಿ.70 ಎಂದು ಗುರುತಿಸಲಾಯಿತು. ಒಟ್ಟು 15 ವಸ್ತುಗಳು ಇತ್ತು. ಸದರಿ 15 ವಸ್ತುಗಳಲ್ಲಿ , ಸೈಜುಗಲ್ಲು, ಎರಡು ಮರದ ಕಡ್ಡಿಗಳು, ಎರಡು ಕುಡಗೋಲು, ಒಂದು ಮಚ್ಚು ಮತ್ತು ಬಟ್ಟೆಗಳು ಇದ್ದವು.

4) ನನ್ನನ್ನು ಆರೋಪಿಗಳ ಪತ್ತೆಗೆ ನೇಮಕ ಮಾಡಿದ್ದರು, ಇಬ್ಬರು ಆರೋಪಿಗಳು ಪತ್ತೆ ಆಗಲಿಲ್ಲ, ಈ ಬಗ್ಗೆ ಮೇಲಾಧಿಕಾರಿಗೆ ನೀಡಿದ ನಿಪಿ. 66 ವರದಿಯನ್ನು ಈಗ ನೋಡುತ್ತಿದ್ದು, ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.66(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಆರ್ ವಿ ವಕೀಲರಿಂದ ಃ**

1) 15 ವಸ್ತುಗಳನ್ನು ಪ್ಯಾಕ್ ಮಾಡಿದ್ದರು, ನಾನು ಅವುಗಳನ್ನು ನೋಡಲಿಲ್ಲ. ನಾನು ಯಾವುದೇ 15 ವಸ್ತುಗಳನ್ನು ತೆಗೆದುಕೊಂಡು ಹೋಗಿ ಎಫ್ ಎಸ್ ಎಲ್ ಕಚೇರಿಗೆ ತೆಗೆದುಕೊಂಡು ಹೋಗಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕರ್ತವ್ಯಕ್ಕೆ ನನ್ನನ್ನು ಮೇಲಾಧಿಕಾರಿಗಳು ನೇಮಕ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಪತ್ತೆಗೆ ನೇಮಕ ಮಾಡಿದ್ದಕ್ಕೆ ನನಗೆ ನೇಮಕಾತಿ ಪತ್ರವನ್ನು ಕೊಟ್ಟಿರಲಿಲ್ಲ. ನನ್ನನ್ನು ಆರೋಪಿಗಳ ಪತ್ತೆಗೆ ನೇಮಕ ಮಾಡಿರಲಿಲ್ಲ ಎಂದರೆ ಸರಿಯಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.